| |
|---|
| **Deposition Sheets (RP.No.57) Form No.4** |

**IN THE COURT OF ADDL. CIVIL JUDGE & J.M.F.C., KARKALA.**

**Criminal Case No. 573/2020**

ಪಿಡ್ಬ್ಲೂಃ 11 ಸಿಡ್ಲ್ಯೂಃ 12

ಸಾಕ್ಷಿದಾರನ ಹೆಸರು : ಲಕ್ಷ್ಮೀ ನಾರಯಣ

ತಂದೆಯ ಹೆಸರು : ಗುರುರಾಘವೇಂದ್ರ

ಪ್ರಾಯ : 33 ವರ್ಷ

ಉದ್ಯೋಗ : ಕೂಲಿ

ವಾಸ : ಕಬ್ಬಿನಾಲೆ

ದಿನಾಂಕ 18.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ಈ ದಿನ ನ್ಯಾಯಾಲಯದ ಮುಂದೆ ಇರುವ 1 ನೇ ಅರೋಪಿಯನ್ನು ನಾನು ನೋಡಿ ಗುರುತಿಸಿದ್ದೇನೆ.

ಚಾಸಾ-9 ರವರ ಮನೆಯ ಬಳಿ ಗಾಳಿ ಮಳೆಯಿಂದ ತೆಂಗಿನ ಮರ ಎಲ್ಕ್ಟಿಕ್ ಕಂಬದ ಮೇಲೆ ಬಿದ್ದು ಕಂಬ ತುಂಡಾಗಿ ವಿದ್ಯುತ್ ವಯರ್ ಗಳು ತುಂಡಾದ ವಿಚಾರವನ್ನು 1 ನೇ ಆರೋಪಿಗೆ ತಿಳಿಸಿರುತ್ತೇನೆ. ಮರುದಿನ 2 ನೇ ಅರೋಪಿ ತುಂಡಾದ ವಿದ್ಯುತ್ ಕಂಬ ಸರಿಪಡಿಸುವಾಗ ಎಲ್ ಟಿ ವಯರ್ ಹಾದುಹೋಗಿರುವ ಹೆಚ್ ಟಿ ವಯರ್ ಗೆ ತಾಗಿ ಕೆಲಸಗಾರ ಗುರುರಾಜ್ ಮೃತಪಟ್ಟ ವಿಚಾರ ಗೊತ್ತಿಲ್ಲ. ಯಾರಿಗೆಲ್ಲ ಗಾಯ ಆಗಿದೆ ಎಂದು ಗೊತ್ತಿಲ್ಲ. ಗುತ್ತಿಗೆದಾರರ ವಿರುದ್ಧ ಪ್ರಕರಣ ದಾಖಲಾದ ವಿಚಾರ ಗೊತ್ತಿಲ್ಲ. ನನ್ನನ್ನು ಪೊಲೀಸರು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ</u>    <u>ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ದಿನಾಂಕ 31.07.2019 ರಂದು ಚಾಸಾ-9 ರವರ ಮನೆಯ ಬಳಿ ವಿದ್ಯುತ್ ಗುತ್ತಿಗೆದಾರರಾದ 1 ನೇ ಆರೋಪಿ ಮತ್ತು ಅವರ ಕೆಲಸಗಾರರು ತುಂಡಾದ ವಿದ್ಯುತ್ ಕಂಬ ಮತ್ತು ಲೈನ್ ಗಳನ್ನು ಸರಿಪಡಿಸುವಾಗ ಎಲ್ ಟಿ ವಯರ್ ಸುಮಾರು 80 ಮಿಾಟರ್ ದೂರದಲ್ಲಿ ಹಾದುಹೋಗಿರುವ ಹೆಚ್ ಟಿ ಗೆ ತಾಗಿ ಒಮ್ಮೆಲೆ ಎಲ್ ಟಿ ವಯರ್ ನಲ್ಲಿ ವಿದ್ಯುತ್ ಹರಿದು ಕೆಲಸಗಾರರಾದ ಗುರುರಾಜ್ ರವರು ಮೃಪಟ್ಟಿದ್ದು ಚಾಸಾ-2, 3 ರವರಿಗೆ ಗಾಯವಾಗಿದ್ದು ಈ ಘಟನೆಯ ಬಗ್ಗೆ 1 ರಿಂದ 3 ನೇ ಆರೋಪಿತರ ವಿರುದ್ಧ ಹೆಬ್ರಿ ಠಾಣೆಯಲ್ಲಿ ಪ್ರಕರಣ ದಾಖಲಾದ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ದಿಃ02.08.2019 ರಂದು ಪೊಲೀಸರು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-16 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ  ಪಿ ಎ ಎಸ್ ವಕೀಲರಿಂದಃ

ಎಲ್ಕ್ಟಿಕ್ ಕಂಬ ಮೇಲೆ ತೆಂಗಿನ ಮರ ಬಿದ್ದಿರುವ ವಿಚಾರ ಗೊತ್ತಿದೆ ಆದರೆ ಲೈನ್ ವಯರ್ ತುಂಡಾದ ಬಗ್ಗೆ ಗೊತ್ತಿಲ್ಲ.  ಲೈನ್ ವಯರ್ ತುಂಡಾದ ಬಗ್ಗೆ ಪೊಲೀಸರಿಗೆ ತಿಳಿಸಿರುವುದಿಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ